

ಎರಡು ಘಳಿಗೆಯಲ್ಲೇ ನೀರಿನ ದೊಡ್ಡ ಅಲೆಯೊಂದು ಬಂದು ಇವರ ಹೊಟ್ಟೆಯವರೆಗೆ ಒದ್ದೆ ಮಾಡಿ, ತೇಲಿಸಿ, ವಾಪಾಸು ಹೋಯ್ತು. ಅದು ಹೋಗುವಾಗ ಕಾಲಡಿಯ ನೆಲವೆಲ್ಲಾ ಸರಿದು ಹೋಗುವಂತೆ ಅನಿಸಿ ಮೂವರೂ ಕಿರುಚಿದರು. ನೀರಲ್ಲಿ ಒದ್ದೆಯಾಗುವ, ತೇಲುವ ಅನುಭವ ಅವರಿಗೆ ಕೆರೆಯಲ್ಲಿ ಮುಳುಗಿ ಎದ್ದು ಗೊತ್ತಿದ್ದರೂ ಇದು ತೀರಾ ಹೊಸದು. ಒಬ್ಬರ ಮಾತು ಒಬ್ಬರಿಗೆ ಕೇಳದಷ್ಟು ಸಮುದ್ರ್ರದ ಗಟ್ಟಿ ಬೊಬ್ಬೆ ಬೇರೆ! ಬಸ್ಸಿನಲ್ಲಿ ಬರುವಾಗ ಸಿಕ್ಕಿದ ದೊಡ್ಡ ನದಿಗಿಂತ ದೊಡ್ಡದಿದು. ಪ್ರತೀ ಸಲ ಅಲೆಗಳು ಬಂದು ಮರಳು ಎಳೆದುಕೊಂಡು ಹೋದಾಗೆಲ್ಲಾ ಇವರುಗಳೂ ನಕ್ಕು ನಕ್ಕು ಬೊಬ್ಬೆ ಹಾಕಿಟ್ಟರು. ಇವರು ಜಾಸ್ತಿ ಮುಂದೆ ಹೋಗದಂತೆ ಅಮ್ಮ, ಪಿನ್ನಮ್ಮ ಇಬ್ಬರೂ ತಾಕೀತು ಮಾಡಿ ಪಕ್ಕದಲ್ಲಿಯೇ ನಿಂತರು. ಮುಂದೆ ಮುಂದೆ ಮುಂದೆ ಹೋಗಿ ಅದರಲ್ಲಿ ತೇಲಿ ಹೋಗಬೇಕೆನಿಸಿತು ಜನ್ನುವಿಗೆ. ಆದರೆ ಸಮುದ್ರ ಎತ್ತಿಕೊಂಡು ಹೋಗುತ್ತದೆ, ಅದರೊಟ್ಟಿಗೆ ಜಾಸ್ತಿ ಆಟವಾಡಬಾರದೆಂಬ ತಿಳಿವೂ ಹುಟ್ಟಿತ್ತು. ಒಂದು ಸ್ವಲ್ಪ ಹೊತ್ತಿನಲ್ಲಿ ಚಿಕ್ಕಪ್ಪ ಪುಟ್ಟಿಯನ್ನೆತ್ತಿಕೊಂಡು ಬಂದರು. ಅವಳ ಕಾಲಂಚನ್ನು ನೀರಿಗೆ ತಾಗಿಸಿದರು. ಆಟವಾಡುತ್ತಿದ್ದ ಎಲ್ಲರನ್ನೂ ನೋಡಿ ಧೈರ್ಯ ಮಾಡಿ ಅವಳು ಬಂದಿದ್ದಳು. ಆದರೆ ಕೆಳಗೆ ಇಳಿಯಲು ಮಾತ್ರ ಒಪ್ಪಲಿಲ್ಲ.

ಜನ್ನುವಿಗೆ ಬಾಯಾರಿಕೆಯೆನಿಸಿ, ಮನೆಯ ಹಿಂದಿನ ಕೆರೆಯಲ್ಲಿ ಕುಡಿದಂತೆ ಇಲ್ಲೂ ಬೊಗಸೆ ತುಂಬಾ ನೀರು ತುಂಬಿಸಿಕೊಂಡು ಬಾಯಿಗಿಟ್ಟ. ಕೂಡಲೇ 'ಅಯ್ಯೋ, ಉಪ್ಪುಪ್ಪು' ಎಂದು ಉಗುಳಿಬಿಟ್ಟ. ಬಾಯಿಯಿಡೀ ಉಪ್ಪುಪ್ಪಾಗಿತ್ತು. ಜಾನು ಜೋರಾಗಿ ನಕ್ಕಳು. ತಿಮ್ಮುವೂ ಒಂದು ಹನಿ ರುಚಿ ನೋಡಲು ಹೋಗಿ ಮುಖ ಹುಳಿ ಮಾಡಿದ. ಇಷ್ಟು ನೀರಿಗೆ ಉಪ್ಪು ಯಾರು ಹಾಕಿರಬಹುದು ಅಂತನಿಸಿತು ಅವರಿಗೆ.

ಜಾನು ‘ಇಬ್ರಿಗೆಸಾ ಗೊತ್ತಿಲ್ವಾ? ಸಮುದ್ರದ ನೀರು ಯಾವಾಗ್ಲೂ ಉಪ್ಪಾಗಿರುತ್ತೆ. ಮನೆಯಲ್ಲಿ ಊಟಕ್ಕೆಲ್ಲಾ